ಕಂಪ್ಲೇಂಟ್ ಬಂದಿದ್ದರಿಂದ ಆರು ದಿನಗಳ ಹಿಂದೆ ನಾನೇ ರಾಜಮಹೇಂದ್ರಿ ಜೈಲಿಗೆ ಹೋಗಿದ್ದೆ. ಹುಡುಗ ತುಂಬಾ ಸ್ಮಾರ್ಟ್ ಇದಾನೆ. ಜೋರಾಗಿ ಬೆಂಡ್ ಎತ್ತಿ, ಏರೋಪ್ಲೇನ್ ರುಚಿ ತೋರಿಸಿ ಅಂತ ನಾನೇ ಜೈಲು ಸೂಪರಿಟೆಂಡೆಂಟ್‌ಗೆ ಹೇಳಿ ಬಂದಿದ್ದೆ..." ಕೃಷ್ಣ ಮನೋಹರ ಹೇಳುತ್ತಿದ್ದ ಸಂಗತಿಗಳನ್ನು ಕೇಳಿ ದಂಗಾಗಿದ್ದೆ. ಆ ಕ್ಷಣ ಮಧ್ಯಾಹ್ನ ವೈನ್ ಕುಡಿಯುತ್ತಿದ್ದಾಗ ನರಸಿಂಹರೆಡ್ಡಿ ತಮ್ಮ ಕುಟುಂಬದ ಪೂರ್ವಿಕರಲ್ಲೊಬ್ಬರಾದ ಪಚ್ಚಿ ನೆತ್ತರು ರಾಮರೆಡ್ಡಿಯ ಪ್ರಸ್ತಾಪ ಮಾಡಿದ್ದು ನೆನಪಾಗಿ ಅಚ್ಚರಿಗೊಂಡಿದ್ದೆ.

"ಹೆರಿಡಿಟಿ..." ನನ್ನ ಬಾಯಿಂದ ಹೊರ ಬಂದಿತ್ತು ಮಾತು.

"ಅಂದರೆ..." ಕೃಷ್ಣ ಮನೋಹರ ಕೇಳಿದ್ದ. ನಾನು ಎಲ್ಲವನ್ನೂ ಹೇಳಿದ್ದೆ. "ಮೈಗಾಡ್..." ಎಂದವನೇ ಹಾಟ್‌ಲೈನ್‌ನಲ್ಲಿ ರಾಜಮಹೇಂದ್ರಿಯ ಜೈಲು ಸೂಪರಿಟೆಂಡೆಂಟ್‌ಗೆ ಕನೆಕ್ಷನ್ ತೆಗೆದುಕೊಂಡಿದ್ದ. "ಆ ಪ್ರತಾಪಸಿಂಹರೆಡ್ಡಿಗೆ ಟ್ರೀಟ್‌ಮೆಂಟ್ ನಿಲ್ಲಿಸಿ ಬಿಡಿ, ಸುಸ್ತಾಗಿರಬೇಕು ಪಾಪ..." ಎಂದು ಹೇಳಿ ನನ್ನ ಕಡೆ ನೋಡಿ, "ಆಯ್ತಲ್ಲ ಇನ್ನೇನು..." ಎಂದಿದ್ದ. ಮಹಮ್ಮದ್ ಪೈಲ್ವಾನ್ ಬಗ್ಗೆ ಪ್ರಸ್ತಾಪಿಸುತ್ತಾ, "ಆ ಮಹಮ್ಮದ್ ಪೈಲ್ವಾನ್ ಎಂಥಾ ಚಾಣಕ್ಯ ಗೊತ್ತ. ಹದಿನೈದು ವರ್ಷಗಳ ಹಿಂದೆ ನಾನು ಕಮ್ಮಂನ ಎಸ್ಪಿಯಾಗಿದ್ದೆ. ಆ ಟೈಮಿನಲ್ಲಿ ಹೈದರಾಬಾದ್‌ನಲ್ಲಿ ಅವನದು ತುಂಬಾ ಹವಾ ಇತ್ತು. ಅವನನ್ನು ಮುಗಿಸಲು ಇಲ್ಲಿನ ವಿರೋಧಿ ಗುಂಪಿನವರು ಮುಂಬಯಿಂದ ಶಾರ್ಪ್ ಶೂಟರ್‌ಗಳನ್ನು ಕರೆಸಿದ್ದರು. ಆ ಶಾರ್ಪ್ ಶೂಟರ್‌ಗಳು ಕರೆಸಿದವರನ್ನೆ ಶೂಟ್ ಮಾಡಿ ಹೋಗಿದ್ದರು! ಅದರ ಹಿಂದೆ ಪೈಲ್ವಾನನ ಮಹಾನ್ ಕುತಂತ್ರ ಇತ್ತಂತೆ. ಆ ಫೈಲು ಚಾರ್ಮಿನಾರ್ ಪೊಲೀಸ್ ಸ್ಟೇಷನ್ನಿನಲ್ಲಿ ಇನ್ನೂ ದೂಳು ಹಿಡಿದು ಕುಳಿತಿರಬೇಕು. ಸಂಬಂಧಿಕರನ್ನು ನೋಡಲು ಜೈಲಿಗೆ ಬಂದಾಗ ನನ್ನ ಕಣ್ಣಿಗೂ ಒಂದೆರಡು ಸಾರಿ ಬಿದ್ದಿದ್ದಾನೆ ಪೈಲ್ವಾನ್. ಸ್ಟ್ರಾಟಜಿ ಮಾಡುವುದರಲ್ಲಿ ನಕ್ಸಲರನ್ನು ಮೀರಿಸ್ತಾನೆ. ಪೊಲೀಸ್ ಡಿಪಾರ್ಟ್‌ಮೆಂಟ್‌ನೋರು ಅದ್ಯಾಕೋ ಅವನನ್ನು ತುಂಬಾ ಇಷ್ಟ ಪಡ್ತಾರೆ. ಸಿನಿಮಾದೋರೂ ಅವನನ್ನು ಕಂಡರೆ ಪ್ರಾಣಬಿಡ್ತಾರೆ. ಅವನು ಹೇಳೊ ಒಂದೆರಡು ಘಟನೆಗಳನ್ನೆ ಇಟ್ಟುಕೊಂಡು ದೊಡ್ಡ ಬಡ್ಜೆಟ್ ಸಿನಿಮಾ ಮಾಡ್ತಾರೆ. ಈಗ ಎಲ್ಲವನ್ನೂ ಬಿಟ್ಟು ಮಟನ್ ಬಿಸಿನೆಸ್ ಮಾಡ್ತಾನಂತೆ..." ಕೃಷ್ಣ ಮನೋಹರ್ ಪೈಲ್ವಾನ್ ಬಗ್ಗೆ ಮತ್ತಷ್ಟು ವಿಷಯಗಳನ್ನು ಅನಾವರಣ ಮಾಡಿ ಅಚ್ಚರಿಪಡಿಸಿದ್ದ. ಅಂಥಾ ವ್ಯಕ್ತಿ ಮಧ್ಯಾಹ್ನ ತನ್ನ ಕೈಯ್ಯಾರೆ ನನಗೆ ಊಟ ಬಡಿಸಿದ್ದ!! ಕೃಷ್ಣ ಮನೋಹರ್ ತನ್ನ ವೆಹಿಕಲ್‌ನಲ್ಲಿ ನನ್ನನ್ನು ಹೋಟೆಲ್‌ಗೆ ಡ್ರಾಪ್ ಮಾಡಿಸಿದ್ದ.

ಹೋಟೆಲ್ ರೂಮು ತಲುಪಿದಾಗ ಎಂಟು ಗಂಟೆಯಾಗಿತ್ತು. ಯಾಕೋ ಡಾಕ್ಟರ್ ಜೀಮೂತವಾಹನನೊಂದಿಗೆ ಮಾತನಾಡಬೇಕೆನಿಸಿ ಫೋನು ಮಾಡಿದ್ದೆ. "ಗೊತ್ತಾಯ್ತು, ನೀನು ಏನೋ ತುಂಬಾ ಗೊಂದಲದಲ್ಲಿರುವಂತೆ ಕಾಣ್ತೆದೆ. ಮನುಷ್ಯ ಯಾವೊತ್ತೂ ಘನತರವಾದ ಗೊಂದಲಗಳಿಂದ ಹೊರಬರಲಾದಂಥ ಸ್ಥಿತಿಗಳನ್ನು ಸೃಷ್ಟಿಯೆಂಬ ವಿಸ್ಮಯ ನಿರ್ಮಾಣ ಮಾಡಿದೆ. ಪ್ರಪಂಚದ ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ಗೊಂದಲದಲ್ಲಿ ಬಿದ್ದೇ ಬಿದ್ದಿರುತ್ತಾನೆ." ಫೋನಿನ ಮೂಲಕ ನನ್ನ ಮಿಡಿತವನ್ನು ಅರಿತ ಜೀಮೂತವಾಹನನ ಬಗ್ಗೆ ಹೆಮ್ಮೆಯೆನಿಸಿತು.

"ಬಿಡುವಾಗಿದ್ದೀಯ..." ಕೇಳಿದ್ದೆ.

"ಡಾಕ್ಟರ್‌ಗಳು ಎಲ್ಲಿ ಬಿಡುವಾಗಿರ್ತಾರೆ ಹೇಳಯ್ಯ ಮಿತ್ರ. ಆದರೂ ಆತ್ಮೀಯರಿಗೆ ಬಿಡುವು ಮಾಡಿಕೊಳ್ಳೋದು ಧರ್ಮ. ಸಿಗರೇಟು ಸೇದೋಕೆ ಅಂತ ಆಂಟಿ ಚೇಂಬರಿಗೆ ಬಂದೆ, ಅಷ್ಟರಲ್ಲಿ ನಿನ್ನ ಧ್ವನಿ." ಎಂದವನಿಗೆ ಮೂರು ನಿಮಿಷಗಳಲ್ಲಿ ಹೈದರಾಬಾದ್‌ನಲ್ಲಿ ನಡೆದ ಘಟನೆಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದ್ದೆ.